ಜೀವಿಗಳು ಉಸಿರಾಡುತ್ತವೆ.

Do it yourself :

Collect the seeds of ragi or brinjal or tomato or chilli. Fill soil into an empty pot or box. Sow the collected seeds in the soil. Sprinkle water on it every day. Observe carefully the changes that take place in a week. Write here the changes that you have observed.



ರಾಗಿ, ಬದನೆ, ಟೊಮ್ಯಾಟೊ, ಮೆಣಸಿನ ಕಾಯಿ ಇವುಗಳಲ್ಲಿ ಯಾವುದಾದರೂ ಒಂದರ ಬೀಜಗಳನ್ನು ಸಂಗ್ರಹಿಸು. ಒಂದು ಖಾಲಿ ಮಡಕೆ ಅಥವಾ ಡಬ್ಬದಲ್ಲಿ ಮಣ್ಣನ್ನು ತುಂಬಿಸು. ಸಂಗ್ರಹಿಸಿದ ಬೀಜಗಳನ್ನು ಆ ಮಣ್ಣಿನಲ್ಲಿ ನೆಡು. ಪ್ರತಿದಿನ ಸ್ವಲ್ಪ ನೀರು ಸಿಂಪಡಿಸು. ಒಂದು ವಾರದಲ್ಲಿ ಆಗುವ ಬದಲಾವಣೆಗಳನ್ನು

© KTBS NOT TO BE REPUBLISHED

ಗಮನವಿಟ್ಟು ನೋಡು. ಗಮನಿಸಿದ ಬದಲಾವಣೆಗಳನ್ನು ಇಲ್ಲಿ ಬರೆ.

_____


_____


Plants and animals are living beings. Air, water, soil and such other things are non-living things. Air, water and soil are essential for the living beings to live. The system in which the living beings and non-living things live together is environment.

ಸಸ್ಯ ಮತ್ತು ಪ್ರಾಣಿಗಳು ಜೀವಿಗಳಾಗಿವೆ. ಗಾಳಿ, ನೀರು, ಮಣ್ಣು ಮುಂತಾದವು ನಿರ್ಜೀವಿಗಳು. ಜೀವಿಗಳು ಬದುಕಲು ಗಾಳಿ, ನೀರು, ಮಣ್ಣು ಬೇಕೇ ಬೇಕು. ಜೀವಿ ಮತ್ತು ನಿರ್ಜೀವಿಗಳು ಕೂಡಿ ಬಾಳುವ ಒಂದು ವ್ಯವಸ್ಥೆಯೇ ಪರಿಸರ.


There are some similarities between plants and animals. **For example,** both plants and animals respire. Observe the pictures given below. Write the similarities in the space provided.

ಸಸ್ಯ ಮತ್ತು ಪ್ರಾಣಿಗಳ ನಡುವೆ ಕೆಲವು ಹೋಲಿಕೆಗಳಿವೆ. **ಉದಾಹರಣೆಗೆ,** ಸಸ್ಯ ಮತ್ತು ಪ್ರಾಣಿಗಳು ಉಸಿರಾಡುತ್ತವೆ. ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ಗಮನಿಸು. ಆ ಹೋಲಿಕೆಗಳು ಯಾವುವೆಂದು ಕೊಟ್ಟಿರುವ ಜಾಗದಲ್ಲಿ ಬರೆ.











© KTBS NOT TO BE REPUBLISHED








You have observed the differences between plants and animals. Look at the pictures given below and write the differences in the space provided.

ಸಸ್ಯ ಮತ್ತು ಪ್ರಾಣಿಗಳ ನಡುವೆ ಇರುವ ವ್ಯತ್ಯಾಸಗಳನ್ನು ಗಮನಿಸಿರುವೆ. ಕೆಳಗಿನ ಚಿತ್ರಗಳನ್ನು ನೋಡು. ಕಂಡು ಬರುವ ವ್ಯತ್ಯಾಸಗಳನ್ನು ಕೊಟ್ಟಿರುವ ಜಾಗದಲ್ಲಿ ಬರೆ.









@KTBS NOT TO BE REPUBLISHED

LESSON – 4

THE STORY OF A DROP OF WATER

W3A8R6

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- *identify the different sources of water.*

  ನೀರಿನ ವಿವಿಧ ಆಕರಗಳನ್ನು ಗುರುತಿಸುವೆ.

- *explain how far water used for household activities is brought from.*

  ಮನೆ ಬಳಕೆಯ ನೀರನ್ನು ಎಷ್ಟು ದೂರದಿಂದ ತರುವರು ಎಂಬುದನ್ನು ವಿವರಿಸುವೆ.

- *understand the necessity and quantity of water needed for day to day activities.*

  ಪ್ರತಿ ನಿತ್ಯದ ಕೆಲಸಗಳಿಗೆ ನೀರಿನ ಅವಶ್ಯಕತೆ ಮತ್ತು ಬಳಕೆಯ ಪ್ರಮಾಣವನ್ನು ಅರಿಯುವೆ.

- *discuss the size, shape and material used to prepare the vessels (containers) that are used to store water.*

  ನೀರನ್ನು ಸಂಗ್ರಹಿಸುವ ಪಾತ್ರೆಗಳ ಗಾತ್ರ, ಆಕಾರ ಮತ್ತು ಮಾಡಲ್ಪಟ್ಟ ಸಾಮಗ್ರಿಯ ಬಗ್ಗೆ ಚರ್ಚಿಸುವೆ.


- *understand the safety methods to be followed in storage and proper use of water.*

  ನೀರಿನ ಸಂಗ್ರಹಣೆಯಲ್ಲಿ ಮತ್ತು ಬಳಕೆಯಲ್ಲಿ ಅನುಸರಿಸುವ ಸುರಕ್ಷಿತ ವಿಧಾನಗಳನ್ನು ಅರಿಯುವೆ.

©KTBS NOT TO BE REPUBLISHED

Oh! dear child .... I am a drop of water. I am coming to the earth from the clouds, drop by drop as rain. I fall on you now.... you get wet! Go inside with your friends....

ಓ ಹೋಯ್! ಪುಟಾಣಿ....
ನಾನು ನೀರಿನ ಹನಿ. ನಾನು
ಮೋಡದಿಂದ ಹನಿ ಹನಿಯಾಗಿ,
ಮಳೆಯಾಗಿ ಭೂಮಿಗೆ ಬರುತ್ತಿದ್ದೇನೆ.
ನಿನ್ನ ಮೇಲೆ ಬೀಳುತ್ತೇನೀಗ....
ನೆನೆದು ಬಿಡುವೆ! ಗೆಳೆಯರೊಡನೆ
ಒಳಹೋಗು....





Oh! Dear drop of water, I love to get wet. Where are you going ? My friends and I will come with you. Dear drop, will you take us....?

ಓ! ಹನಿಯಣ್ಣಾ ನೆನೆಯುವುದು ನನಗಿಷ್ಟ.
ನೀನೆಲ್ಲಿ ಹೊರಟೆ? ನಾನೂ, ನನ್ನ
ಗೆಳೆಯರೂ ನಿನ್ನೊಂದಿಗೆ ಬರುವೆವು.
ಅಣ್ಣಾ ಕರೆದೊಯ್ಯುವೆಯಾ....?

@KTBS NOT TO BE REPUBLISHED



I flow to different places. It may be difficult for you to come with me.

ನಾನು ಎಲ್ಲಿ ಎಲ್ಲಿಯೋ ಹರಿಯುತ್ತೇನೆ. ನಿಮಗೆ ನನ್ನ ಜೊತೆ ಬರಲು ಕಷ್ಟವಾಗಬಹುದು.

No!.... we also come with you.

ಇಲ್ಲ!.... ನಾವೂ ಬರುತ್ತೇವೆ.





All right.... Look at the picture and know the places that I flow through, after I fall on the earth.

ಸರಿ ಹಾಗಾದರೆ.... ಭೂಮಿಯ ಮೇಲೆ ಬಿದ್ದ ನಾನು ಎಲ್ಲೆಲ್ಲಿ ಹೋಗಿ ಸೇರುತ್ತೇನೆ ಎಂಬುದನ್ನು ಚಿತ್ರ ನೋಡಿ ತಿಳಿಯಿರಿ.

Oh!.... we are ready.

ಓಹೋ!.... ನಾವು ರೆಡಿ.




NOT TO BE REPUBLISHED

Children....Look at the picture and write its name in the space provided.

ಮಕ್ಕಳೇ.... ಚಿತ್ರ ನೋಡಿ, ಅದರ ಹೆಸರನ್ನು ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆಯಿರಿ.







@KTBS NOT TO BE REPUBLISHED





All right, children.... you already know that the places where I get stored are the sources of water.

ಸರಿ, ಮಕ್ಕಳೇ....
ನಾನೀಗ ಸೇರಿದ ಜಾಗಗಳೇ ನೀರಿನ ಆಕರಗಳು ಎಂದು ನಿಮಗೀಗಾಗಲೇ ಗೊತ್ತು.





Dear drop of water.... do you know that there are many sources of water in our place also?

ಹನಿಯಣ್ಣಾ.... ನಮ್ಮ ಊರಿನಲ್ಲೂ ನೀರಿನ ಹಲವು ಆಕರಗಳಿವೆ ಗೊತ್ತೇ?

@KTBS NOT TO BE REPUBLISHED

Is it so?
ಹೌದೇ?



Activity :

Children .... the names of the sources of water are hidden in the word grid given below. Identify them.

ಮಕ್ಕಳೇ.... ಕೆಳಗೆ ನೀಡಿರುವ ಪದಬಂಧದಲ್ಲಿ ನೀರಿನ ಆಕರಗಳು ಅಡಗಿವೆ. ಅವುಗಳನ್ನು ಪತ್ತೆ ಹಚ್ಚಿ.

River
ನದಿ



Pond
ಕೆರೆ



Rain
ಮಳೆ




A	H	R	I	V	U	L	E	T
P	O	A	B	R	I	V	E	R
O	L	I	S	T	R	E	A	M
H	A	N	D	P	U	M	P	L
D	K	N	V	F	K	X	O	B
W	E	L	L	Y	D	A	N	C
V	W	Z	S	E	A	E	D	J


Stream
ಹೊಳೆ




Rivulet
ಝರಿ



Well
ಬಾವಿ





Sea
ಸಮುದ್ರ




Hand pump
ಕೈಪಂಪು

NOT TO BE REPUBLISHED @KTBS



Children.... write the names of my sources found in your place in the space provided.
ಪುಟಾಣಿಗಳೇ.... ನಿಮ್ಮ ಊರಿನಲ್ಲಿರುವ ನನ್ನ ಆಕರಗಳ ಹೆಸರನ್ನು ಕೊಟ್ಟಿರುವ ಜಾಗದಲ್ಲಿ ಬರೆಯಿರಿ.



Did you write tap also....?
It is also correct.
ನಲ್ಲಿಯನ್ನೂ ಬರೆದಿರಾ....?
ಅದೂ ಸರಿಯೇ.



Drop of water.... Is tap not a source of water....?
We store water from the tap itself. Don't you know....?
ಹನಿಯಣ್ಣಾ.... ನಲ್ಲಿಯು ನೀರಿನ ಆಕರ ಅಲ್ವೇ....? ನಾವು ಅದರಿಂದಲೇ ನೀರನ್ನು ಸಂಗ್ರಹಿಸುತ್ತೇವೆ ಗೊತ್ತಾ....?

© KTBS NOT TO BE REPUBLISHED

But the tap is not my source.
I come in the tap from other sources.
Understand ....? **For example,** I may come from a pond or a river.

ಆದರೆ ನಲ್ಲಿಯು ನನ್ನ ಆಕರ ಅಲ್ಲ.
ಬೇರೆ ಬೇರೆ ಆಕರಗಳಿಂದ ನಾನು ನಲ್ಲಿಯಲ್ಲಿ ಬರುತ್ತೇನೆ.
ತಿಳೀತಾ....? **ಉದಾಹರಣೆಗೆ,** ನಾನು ಕೆರೆಯಿಂದ ಬರಬಹುದು, ನದಿಯಿಂದಲೂ ಬರಬಹುದು.







Children.... For what purposes do you use me? Write in the pictures of drops given here.


ಮಕ್ಕಳೇ.... ನೀವು ನನ್ನನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸುತ್ತೀರಿ? ಇಲ್ಲಿ ಕೊಟ್ಟಿರುವ ಹನಿಯ ಚಿತ್ರಗಳಲ್ಲಿ ಬರೆಯಿರಿ.

© KTBS NOT TO BE REPUBLISHED





All right, where
do you bring me from
to your house? Write here.
ಸರಿ, ನಿಮ್ಮ ಮನೆಗೆ ನನ್ನನ್ನು
ಎಲ್ಲಿಂದ ತರುತ್ತೀರಾ?
ಇಲ್ಲಿ ಬರೆಯಿರಿ.





How far are
they located
from your house?
ಇವೆಲ್ಲಾ ನಿಮ್ಮ
ಮನೆಯಿಂದ ಎಷ್ಟು
ದೂರದಲ್ಲಿ ಇವೆ?













© KTBS
NOT TO BE REPUBLISHED











Children.... who brings me to your house? Write the answer inside the drops given here.

ಪುಟಾಣಿಗಳಾ.... ನಿಮ್ಮ ಮನೆಗೆ ನನ್ನನ್ನು ಯಾರು ತರುತ್ತಾರೆ? ಇಲ್ಲಿ ಕೊಟ್ಟಿರುವ ಹನಿಗಳಲ್ಲಿ ಉತ್ತರ ಬರೆಯಿರಿ.








Dear children, What are the sources of drinking water in your school?

ಪುಟಾಣಿಗಳಾ, ನಿಮ್ಮ ಶಾಲೆಯಲ್ಲಿ ಕುಡಿಯುವ ನೀರನ್ನು ಯಾವ ಯಾವ ಆಕರಗಳಿಂದ ತರುತ್ತಾರೆ?



@KTBS NOT TO BE REPUBLISHED



Activity :

Now, all of you read the table given here carefully. Then Put (✓)mark in the column of the source of water used for that work.

ಈಗ ನೀವೆಲ್ಲಾ ಇಲ್ಲಿ ಕೊಟ್ಟಿರುವ ಕೋಷ್ಟಕವನ್ನು ಗಮನವಿಟ್ಟು ಓದಿ. ನಂತರ ಆಯಾ ಕೆಲಸಕ್ಕೆ ಬಳಸುವ ನೀರಿನ ಮೂಲದ ಚೌಕದಲ್ಲಿ (✓) ಗುರುತು ಹಾಕಿ.

Work **ಕೆಲಸ**	**River** ನದಿ	**Pond** ಕೆರೆ	**Well** ಬಾವಿ	**Hand pump** ಕೈಪಂಪು	**Stream** ಹೊಳೆ	**Sea** ಸಮುದ್ರ	**Rivulet** ಝರಿ
drinking ಕುಡಿಯಲು			✓				✓
washing dishes ಪಾತ್ರೆ ತೊಳೆಯಲು							
washing clothes ಬಟ್ಟೆ ಶುಚಿಗೊಳಿಸಲು							
bathing ಸ್ನಾನ ಮಾಡಲು							
cooking ಅಡುಗೆ ಮಾಡಲು							
gardening ಮರ–ಗಿಡಗಳಿಗೆ ಹಾಕಲು							
washing domestic animals ಸಾಕು ಪ್ರಾಣಿಗಳನ್ನು ಶುಚಿಗೊಳಿಸಲು							
washing vehicles ವಾಹನ ತೊಳೆಯಲು							

@KTBS NOT TO BE REPUBLISHED

How do you store me in your house? Look at the picture. Put (✓) mark in the box provided. Also write which materials they are made of, in the space given.

ನನ್ನನ್ನು ನಿಮ್ಮ ಮನೆಯಲ್ಲಿ ಹೇಗೆ ಸಂಗ್ರಹಿಸಿಟ್ಟಿದ್ದೀರಿ? ಚಿತ್ರ ನೋಡಿ. ಕೊಟ್ಟಿರುವ ಜಾಗದಲ್ಲಿ (✓) ಗುರುತು ಹಾಕಿ. ಇವು ಯಾವ ಯಾವ ವಸ್ತುವಿನಿಂದ ತಯಾರಾಗಿವೆ ಎಂಬುದನ್ನು ಕೂಡಾ ಕೊಟ್ಟಿರುವ ಜಾಗದಲ್ಲಿ ಬರೆಯಿರಿ.






✓


mud
ಮಣ್ಣು















@KTBS NOT TO BE REPUBLISHED



Apart from these, if there are other water storage containers in your home, draw their pictures and write their names.

ಇವಲ್ಲದೆ ನಿಮ್ಮ ಮನೆಯಲ್ಲಿ ಬೇರೆ ಸಂಗ್ರಹ ಪಾತ್ರೆಗಳು ಇದ್ದಲ್ಲಿ ಅವುಗಳ ಚಿತ್ರ ಬರೆದು, ಹೆಸರು ಬರೆಯಿರಿ.






© KTBS NOT TO BE REPUBLISHED


Hm!....Children.... from which materials are these containers made of ? Write here.

ಹಾಂ!.... ಮಕ್ಕಳೆ.... ಸಂಗ್ರಹ ಪಾತ್ರೆಗಳು ಯಾವ ಯಾವ ವಸ್ತುಗಳಿಂದ ತಯಾರಾಗಿವೆ? ಇಲ್ಲಿ ಬರೆಯಿರಿ.









The containers made of mud, plastic, steel, copper etc., are used to store water.

ನೀರನ್ನು ಸಂಗ್ರಹಿಸಲು ಮಣ್ಣು, ಪ್ಲಾಸ್ಟಿಕ್, ಸ್ಟೀಲ್, ತಾಮ್ರ ಮುಂತಾದ ವಸ್ತುಗಳಿಂದ ಮಾಡಿದ ಪಾತ್ರೆಗಳನ್ನು ಬಳಸುತ್ತಾರೆ.

Activity :


How many containers are there in your house? Count them and write here.


ನಿಮ್ಮ ಮನೆಯಲ್ಲಿ ಎಷ್ಟು ಸಂಗ್ರಹ ಪಾತ್ರೆಗಳಿವೆ? ಎಣಿಸಿ, ಇಲ್ಲಿ ಬರೆಯಿರಿ.

containers ಪಾತ್ರೆಗಳು				
steel ಸ್ಟೀಲ್	4	2	—	—
plastic ಪ್ಲಾಸ್ಟಿಕ್				
mud ಮಣ್ಣು				
brass ಹಿತ್ತಾಳೆ				
copper ತಾಮ್ರ				
others ಇತರೆ				


@KSEEBSCERT NOT TO BE REPUBLISHED

Draw the pictures of the smallest and the biggest container that you use to store water in your home.
ನಿಮ್ಮ ಮನೆಯಲ್ಲಿ ನೀರು ಸಂಗ್ರಹಿಸುವ ದೊಡ್ಡ ಮತ್ತು ಚಿಕ್ಕ ಪಾತ್ರೆಯ ಚಿತ್ರ ಬರೆಯಿರಿ.





The smallest container ಚಿಕ್ಕ ಪಾತ್ರೆ	**The largest container** ದೊಡ್ಡ ಪಾತ್ರೆ



@KTBS NOT TO BE REPUBLISHED





Oh! This is how you store me. How do you store drinking water?
ಅಬ್ಬಾ! ನನ್ನನ್ನು ಹೀಗೆಲ್ಲಾ ಸಂಗ್ರಹಿಸಿಟ್ಟಿರುವಿರಿ. ಕುಡಿಯಲು ಬಳಸುವ ನೀರನ್ನು ನೀವು ಹೇಗೆ ಸಂಗ್ರಹಿಸುವಿರಿ?




We store drinking water in the containers and close them with lids.


ಕುಡಿಯುವ ನೀರನ್ನು ನಾವು ಪಾತ್ರೆಗಳಲ್ಲಿ ಹಾಕಿ ಮುಚ್ಚಿಡುತ್ತೇವೆ.







NOT TO BE REPUBLISHED @KTBS




Yes, children.... Drinking water should be clean. The container should also be clean. Listen here....

ಹೌದು ಪುಟಾಣಿಗಳೇ.... ಕುಡಿಯುವ ನೀರು ಸ್ವಚ್ಛವಾಗಿರಬೇಕು. ಸಂಗ್ರಹಿಸುವ ಪಾತ್ರೆಯೂ ಸ್ವಚ್ಛವಾಗಿರಬೇಕು. ಇಲ್ಲಿ ಕೇಳಿ....



Drink only the water that is boiled, cooled and stored in a closed container. So that our health will be good.

ಕುದಿಸಿ, ಆರಿಸಿ, ಮುಚ್ಚಿಟ್ಟ ನೀರನ್ನೇ ಕುಡಿಯಿರಿ. ಇದರಿಂದ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ.




It is better to store drinking water in a container having a tap. So that we can avoid the water becoming dirty with the touch of our hands.

ಕುಡಿಯುವ ನೀರನ್ನು ನಲ್ಲಿಯಿರುವ ಪಾತ್ರೆಯಲ್ಲಿ ಸಂಗ್ರಹಿಸಿ, ಬಳಸುವುದರಿಂದ ನಮ್ಮ ಕೈಗಳಲ್ಲಿರುವ ಕೊಳೆಯು ನೀರನ್ನು ಸೇರದಂತೆ ತಡೆಯಬಹುದು.



To take water from a big container, use a ladle.

ದೊಡ್ಡ ಪಾತ್ರೆಯಿಂದ ನೀರನ್ನು ತೆಗೆಯುವಾಗ ಹಿಡಿ ಇರುವ ಪಾತ್ರೆಯನ್ನು ಬಳಸಿರಿ.



Observe this picture.

ಈ ಚಿತ್ರವನ್ನು ಗಮನಿಸಿ.

NOT TO BE REPUBLISHED ©KTBS

Know this :

We should drink only pure water. The lid of the water container should be closed always. Hands should be washed before taking water for drinking.

ಶುದ್ಧವಾದ ನೀರನ್ನೇ ಕುಡಿಯಬೇಕು. ಕುಡಿಯುವ ನೀರನ್ನು ಯಾವಾಗಲೂ ಮುಚ್ಚಿರಬೇಕು. ನೀರನ್ನು ಕುಡಿಯಲು ತೆಗೆದುಕೊಳ್ಳುವ ಮೊದಲು ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.



Activity :

Children....measure how much of water you need in a day and write.

ಪುಟಾಣಿಗಳಾ.... ಒಂದು ದಿನಕ್ಕೆ ನಿಮಗೆ ಎಷ್ಟು ನೀರು ಬೇಕು ಎಂಬುದನ್ನು ಅಳೆದು ಬರೆಯಿರಿ.



O.K dear drop,we will count.

ಸರಿ ಹನಿಯಣ್ಣ, ನಾವೆಲ್ಲಾ ಎಣಿಸ್ತೀವಿ.

Daily work ದಿನದ ಕೆಲಸ	**No. of glasses** ಲೋಟಗಳ ಸಂಖ್ಯೆ	**No. of mugs/jugs** ಚೆಂಬು/ತಂಬಿಗೆಗಳ ಸಂಖ್ಯೆ	**No. of pots** ಬಿಂದಿಗೆಗಳ ಸಂಖ್ಯೆ	**No. of buckets** ಬಕೀಟುಗಳ ಸಂಖ್ಯೆ
to wash hands, legs and face in the morning ಬೆಳಿಗ್ಗೆ ಕೈ–ಕಾಲು, ಮುಖ ತೊಳೆಯಲು		5		
to drink ಕುಡಿಯಲು	8			
to bathe ಸ್ನಾನ ಮಾಡಲು				
to wash clothes ಬಟ್ಟೆಗಳನ್ನು ಒಗೆಯಲು				
to wash dishes ಪಾತ್ರೆಗಳನ್ನು ತೊಳೆಯಲು				
to mop the floor ನೆಲ ಒರೆಸಲು				
for toilet cleaning ಶೌಚಕ್ಕೆ				
others ಇತರೆ				
Total ಒಟ್ಟು				

@KTBS NOT TO BE REPUBLISHED



Now, have you understood how much of water you use in a day?
ಒಂದು ದಿನಕ್ಕೆ ನೀವು ಎಷ್ಟು ನೀರು ಬಳಸುತ್ತೀರಿ ಎಂಬುದು ನಿಮಗೀಗ ತಿಳಿಯಿತೆ?

How many of you are there in your home ?
ನಿಮ್ಮ ಮನೆಯಲ್ಲಿ ನೀವು ಒಟ್ಟು ಎಷ್ಟು ಜನರು ಇದ್ದೀರಿ?



O.K. How much of water do you need in your home in a day? Calculate.
ಹಾಗಾದರೆ ನಿಮಗೆಲ್ಲರಿಗೂ ಒಂದು ದಿನಕ್ಕೆ ಎಷ್ಟು ನೀರು ಬೇಕು? ಲೆಕ್ಕ ಮಾಡಿ.

@KTBS NOT TO BE REPUBLISHED

Members of the family ಮನೆ ಮಂದಿ	**In glasses** ಲೋಟಗಳಲ್ಲಿ	**In mugs/ jugs** ಚೆಂಬು/ ತಂಬಿಗೆಗಳಲ್ಲಿ	**In pots** ಬಿಂದಿಗೆಗಳಲ್ಲಿ	**In buckets** ಬಕೀಟುಗಳಲ್ಲಿ
for me ನನಗೆ				
for my mother ಅಮ್ಮನಿಗೆ				
for my father ಅಪ್ಪನಿಗೆ				
for my brother/sister ಅಣ್ಣ/ಅಕ್ಕನಿಗೆ				
for my grand father/ grand mother/others ಅಜ್ಜ / ಅಜ್ಜಿ / ಇತರರಿಗೆ				
Total ಒಟ್ಟು				



See.... how much of water do your family members and you use in a day?

ನೋಡಿದ್ರಾ.... ಒಂದು ದಿನಕ್ಕೆ ನೀವು ಮತ್ತು ನಿಮ್ಮ ಮನೆಯವರು ನನ್ನನ್ನು ಎಷ್ಟು ಬಳಸುತ್ತೀರಿ ಎಂದು?

Dear children.... have you understood now how essential I am? Remember, I am needed not only for you, but also for the living beings living on this earth. Don't waste me for any reasons. Use me in right and moderate manner.

ಮುದ್ದಿನ ಪುಟಾಣಿಗಳೇ.... ಈಗ ಗೊತ್ತಾಯಿತೆ ನನ್ನ ಅಗತ್ಯ? ನೆನಪಿನಲ್ಲಿಡಿ. ನಾನು ನಿಮಗಷ್ಟೇ ಅಲ್ಲ, ಭೂಮಿಯ ಮೇಲೆ ಇರುವ ಎಲ್ಲಾ ಜೀವಿಗಳಿಗೂ ಬೇಕೇಬೇಕು. ನನ್ನನ್ನು ಯಾವ ಕಾರಣಕ್ಕೂ ಪೋಲು ಮಾಡದೆ, ಹಿತವಾಗಿ, ಮಿತವಾಗಿ ಬಳಸಿ.



All right, drop of water.... we will remember what you have told us.

ಸರಿ ಹನಿಯಣ್ಣಾ.... ನೀನು ಹೇಳಿಕೊಟ್ಟದ್ದನ್ನು ನಾವು ನೆನಪಿಟ್ಟುಕೊಳ್ಳುತ್ತೇವೆ.

© KTBS NOT TO BE REPUBLISHED



Children.... It's enough. You go home. Convey this to all others at home. Let us meet tomorrow. O.K?

ಪುಟಾಣಿಗಳಾ.... ಈಗ ಸಾಕು. ನೀವು ಮನೆಗೆ ಹೋಗಿ. ಇಲ್ಲಿ ಕಲಿತದ್ದನ್ನು ಮನೆಯವರಿಗೂ ತಿಳಿಸಿ. ನಾಳೆ ಮತ್ತೆ ಸಿಗೋಣ. ಆಯ್ತಾ?



O.K. Drop of water....Bye. Let us meet tomorrow.

ಸರಿ ಹನಿಯಣ್ಣಾ.... ಬರುತ್ತೇವೆ. ನಾಳೆ ಮತ್ತೆ ಭೇಟಿಯಾಗೋಣ.

Sing and Enjoy

Oh! drop of water, falling from the cloud
Please come and join the pond by flowing.
The oceans, rivers and tanks too
All are sources of water.

We want you to quench our thirst,
Come to our fields and save our crops.
Water for bathing and cooking.
The cow is thirsty without you.

We can't live without you
We save to conserve you,
We won't waste you and dirty you.
All this calls for goodwill from one and all.

NOT TO BE REPUBLISHED © KSEEB

LESSON – 5

THE FAMILY OF WATER


X7M4W7


After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- *identify the living beings that live in rivers and seas.*
  ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಜೀವಿಗಳನ್ನು ಗುರುತಿಸುವೆ.
- *observe the responses of plants and animals to rain*
  ಮಳೆಗೆ ಸಂಬಂಧಿಸಿದಂತೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆಯನ್ನು ಗಮನಿಸುವೆ.
- *express the response through songs, dance and other cultural expressions related to the river and rain.*
  ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ನೃತ್ಯ ಮುಂತಾದ ಕಲೆಗಳ ಮೂಲಕ ವಿಷಯವನ್ನು ವ್ಯಕ್ತಪಡಿಸುವೆ.
- *identify the changes that occur in the quantity of water flow in different seasons.*
  ಋತುಮಾನಕ್ಕೆ ತಕ್ಕಂತೆ ನೀರಿನ ಹರಿವಿನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸುವೆ.

©KTBS NOT TO BE REPUBLISHED





Yes, look at them. They are charming.

ಹೌದು, ಅವುಗಳನ್ನು ನೋಡು. ಅವು ನಳನಳಿಸುತ್ತಿವೆ.



Drop of water.... today I had been to the river with my sister.

ಹನಿಯಣ್ಣಾ.... ನಾನಿವತ್ತು ಅಕ್ಕನ ಜೊತೆ ನದಿಗೆ ಹೋಗಿದ್ದೆ.



Did you!

ಹೌದೆ!

The fish, frogs and crabs in the river were also dancing happily in the rain.

ನದಿಯಲ್ಲಿದ್ದ ಮೀನು, ಕಪ್ಪೆ ಮತ್ತು ಏಡಿಗಳು ಸಹ ಮಳೆಯಲ್ಲಿ ಕುಪ್ಪಳಿಸುತ್ತಾ ಸಂತೋಷವಾಗಿದ್ದವು.



©KTBS NOT TO BE REPUBLISHED





See....
when I come to the earth in the form of rain, all the living beings feel happy, don't they ?

ನೋಡಿದ್ರಾ.... ನಾನು ಮಳೆಯಾಗಿ ಭೂಮಿಗೆ ಬಂದ್ರೆ ಇಲ್ಲಿರುವ ಜೀವಿಗಳೆಲ್ಲವೂ ಎಷ್ಟು ಸಂತೋಷಪಡುತ್ತವೆ, ಅಲ್ವೇ?



Yes, drop of water
ಹೌದು, ಹನಿಯಣ್ಣ.



Drop by drop, in the form of rain I come to the earth. I flow in the form of streams, revulets and join the rivers. All the rivers flow into the sea. Different kinds of plants and animals live in the streams, rivers and seas.

ಹನಿ ಹನಿಯಾಗಿ, ಮಳೆಯಾಗಿ ಭೂಮಿಗೆ ನಾನು ಬೀಳುವೆ. ತೊರೆಯಾಗಿ, ಝರಿಯಾಗಿ ನದಿಗಳನ್ನು ಸೇರುವೆ. ನದಿಗಳೆಲ್ಲ ಹೋಗಿ ಸಮುದ್ರವನ್ನು ಸೇರುತ್ತವೆ. ತೊರೆಯಲ್ಲಿ, ನದಿಯಲ್ಲಿ, ಸಮುದ್ರದಲ್ಲಿ ವಿಧವಿಧವಾದ ಸಸ್ಯ ಮತ್ತು ಪ್ರಾಣಿಗಳು ಜೀವಿಸುತ್ತವೆ.

@KTBS NOT TO BE REPUBLISHED

Activity :

Look here, it is the picture of a river. Identify the living beings and write their names in the space provided.

ಇಲ್ಲಿ ನೋಡು, ಇದು ನದಿಯ ಚಿತ್ರ. ಇಲ್ಲಿರುವ ಜೀವಿಗಳನ್ನು ಗುರುತಿಸು ಮತ್ತು ಅವುಗಳ ಹೆಸರುಗಳನ್ನು ಕೊಟ್ಟಿರುವ ಜಾಗದಲ್ಲಿ ಬರೆ.



TO BE REPUBLISHED



See, here is the picture of a sea.
Look at the living beings that
live in the sea.
ಇಗೋ ಇಲ್ಲಿದೆ ಸಮುದ್ರದ ಚಿತ್ರ. ಇಲ್ಲಿ ಯಾವ ಯಾವ
ಜೀವಿಗಳು ವಾಸಿಸುತ್ತವೆ ನೋಡಿ.



NOT TO BE REPUBLISHED

Activity :

Some of the living beings are given in the next page. Write their names below their pictures. To place them in the proper habitat, write their names in the related boxes.

ಮುಂದಿನ ಪುಟದಲ್ಲಿ ಕೊಟ್ಟಿರುವ ಜೀವಿಗಳ ಹೆಸರುಗಳನ್ನು
ಆಯಾ ಚಿತ್ರದ ಕೆಳಗೆ ಬರೆ. ಈ ಜೀವಿಗಳನ್ನು ಅವುಗಳ
ಸರಿಯಾದ ವಾಸಸ್ಥಳಕ್ಕೆ ಸೇರಿಸಲು, ಸಂಬಂಧಿಸಿದ
ಚೌಕಗಳಲ್ಲಿ ಅವುಗಳ ಹೆಸರುಗಳನ್ನು ಬರೆ.



 **River** ನದಿ		 **Sea** ಸಮುದ್ರ	

©KTBS NOT TO BE REPUBLISHED



Have you seen a pond, a river or a sea? Collect the pictures of the plants and animals that live there. Paste them in a used note book and write their names.

ನೀನು ಕೆರೆ, ನದಿ ಅಥವಾ ಸಮುದ್ರವನ್ನು ನೋಡಿದ್ದೀಯಾ? ಅಲ್ಲಿ ಜೀವಿಸುವ ಸಸ್ಯ ಮತ್ತು ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸು. ಉಪಯೋಗಿಸಿದ ನೋಟ್ ಪುಸ್ತಕದಲ್ಲಿ ಈ ಚಿತ್ರಗಳನ್ನು ಅಂಟಿಸು. ಅವುಗಳ ಹೆಸರುಗಳನ್ನು ಬರೆ.





Wow! How many plants and animals live in water!
ಅಬ್ಬಾ! ನೀರಿನಲ್ಲಿ ಎಷ್ಟೊಂದು ಸಸ್ಯ, ಪ್ರಾಣಿಗಳು ಜೀವಿಸುತ್ತವೆ!

See,when it rains, the earth looks green. The plants and trees grow lavishly. The ponds and rivers flow full of water. Wow!
ಮಳೆ ಬಂದಾಗ ನೋಡು, ನೆಲವೆಲ್ಲಾ ಹಸಿರೋ ಹಸಿರು. ಗಿಡ ಮರಗಳೆಲ್ಲಾ ಸೊಂಪಾಗಿ ಬೆಳೆಯುತ್ತವೆ. ಕೆರೆ, ನದಿಗಳೆಲ್ಲ ತುಂಬಿ ಹರಿಯುತ್ತವೆ. ಅಬ್ಬಾ!




But, it will not be the same in summer.
ಆದರೆ ಬೇಸಿಗೆಯಲ್ಲಿ ಹೀಗೆ ಇರುವುದಿಲ್ಲವಲ್ಲ.



Yes, drop of water!
ಹೌದು ಹನಿಯಣ್ಣಾ !

True, ponds and streams will dry up. There will be less water in the rivers too.
ನಿಜ, ಕೆರೆ ಕುಂಟೆಗಳು ಬತ್ತಿಹೋಗುತ್ತವೆ. ನದಿಗಳಲ್ಲೂ ನೀರು ಕಡಿಮೆಯಾಗುತ್ತದೆ.



NOT TO BE REPUBLISHED



Activity :

There are ponds and rivers in your place, aren't there? To show the level of water in them, put a (✓) mark in the table given below.

ನಿಮ್ಮ ಊರಿನಲ್ಲಿ ನದಿ ಕೆರೆಗಳಿವೆ, ಅಲ್ವೆ? ಅವುಗಳಲ್ಲಿ ಎಷ್ಟು ನೀರಿದೆ ಎಂದು ಕೆಳಗಿನ ಕೋಷ್ಟಕದಲ್ಲಿ (✓) ಗುರುತು ಹಾಕು.

Sources of water ನೀರಿನ ಆಕರ	**Rainy season** ಮಳೆಗಾಲ			**Winter season** ಚಳಿಗಾಲ			**Summer season** ಬೇಸಿಗೆ ಕಾಲ		
	High ಹೆಚ್ಚು	**Average** ಸಾಧಾರಣ	**Low** ಕಡಿಮೆ	**High** ಹೆಚ್ಚು	**Average** ಸಾಧಾರಣ	**Low** ಕಡಿಮೆ	**High** ಹೆಚ್ಚು	**Average** ಸಾಧಾರಣ	**Low** ಕಡಿಮೆ
River ನದಿ									
Lake ಕೆರೆ									
Channel ಕಾಲುವೆ									
Others ಇತರೆ									

@KTBS NOT TO BE REPUBLISHED



Activity :

Why does the level of water in the rivers, ponds and wells vary during different seasons? Ask your elders and know the reasons.

ನದಿ, ಕೆರೆ, ಬಾವಿಗಳ ನೀರಿನ ಮಟ್ಟ ಬೇರೆ ಬೇರೆ ಕಾಲಗಳಲ್ಲಿ ಏಕೆ ಬದಲಾವಣೆ ಆಗುತ್ತದೆ? ಹಿರಿಯರಿಂದ ಕೇಳಿ ತಿಳಿ.




Children....have you observed plants, trees and animals in different seasons?

ಪುಟಾಣಿಗಳಾ.... ಗಿಡ, ಮರ ಮತ್ತು ಪ್ರಾಣಿಗಳನ್ನು ವಿವಿಧ ಕಾಲಗಳಲ್ಲಿ ಗಮನಿಸಿದ್ದೀರಾ?

Yes, Drop of water. In summer, the plants and trees become dry due to the shortage of water. Even the birds and other animals lose their liveliness.

ಹೌದು, ಹನಿಯಣ್ಣಾ. ಬೇಸಿಗೆಯಲ್ಲಂತೂ ನೀರು ಕಡಿಮೆಯಾಗಿ ಗಿಡ ಮರಗಳೆಲ್ಲಾ ಬಾಡಿರುತ್ತವೆ. ಪಕ್ಷಿಗಳು ಮತ್ತು ಇತರ ಪ್ರಾಣಿಗಳಿಗೆ ಲವಲವಿಕೆಯೇ ಇರುವುದಿಲ್ಲ.





During the rainy season, the ponds and rivers flow with a lot of water due to rain.During summer, it is too hot and less rain. The ponds and rivers become dry.

ಮಳೆಗಾಲದಲ್ಲಿ ಮಳೆ ಬರುತ್ತದೆ, ಹಾಗಾಗಿ ಕೆರೆ, ನದಿಗಳು ತುಂಬಿ ಹರಿಯುತ್ತವೆ. ಬೇಸಿಗೆ ಕಾಲದಲ್ಲಿ ಬಿಸಿಲು ಹೆಚ್ಚು, ಮಳೆ ಕಡಿಮೆ. ನದಿ, ಕೆರೆಗಳ ನೀರು ಬತ್ತಿಹೋಗುತ್ತದೆ.


Yes, drop of water.... You are essential for all animals and plants. We also need you.

ಹೌದು, ಹನಿಯಣ್ಣಾ.... ನೀನೆಲ್ಲರಿಗೂ ಬೇಕು. ಪ್ರಾಣಿಗಳಿಗೂ ಬೇಕು. ಸಸ್ಯಗಳಿಗೂ ಬೇಕು. ನಮಗೂ ಬೇಕು.



NOT TO BE REPUBLISHED © KTBS

Yes, Yes.... You have understood
that, I am essential for all.
ಹೌದೌದು.... ನಾನು ಎಲ್ಲರಿಗೂ ಬೇಕು
ಎಂದು ತಿಳಿದಿರಲ್ಲಾ.
Shall we sing a rain song ?
ಮಳೆಯನ್ನು ಕುರಿತು ಹಾಡು ಹೇಳೋಣವೇ?



Sing and Enjoy

Rain, Rain, come, come,
The gardens are dry,
Rain, Rain, come, come
No water for banana garden.

Rain, Rain, come, come,
Help us grow crops,
The living beings are thirsty;
They are waiting for you,
Why are you so angry
Come and make them happy.
Rain, Rain, come, come
Help us to grow crops.

The rain fall on the earth
drop by drop
The crops on the earth
grow and grow
There is happiness
all around
The earth is beautiful
with greenery.

NOT TO BE REPUBLISHED ©KTBS




You also write a poem on rain.

ಮಳೆಯ ಬಗ್ಗೆ ನೀನೂ ಒಂದು ಕವನ ಬರೆ.











What do you do when it rains?

ಮಳೆ ಬಂದಾಗ ನೀನೇನು ಮಾಡುವೆ?









NOT TO BE REPUBLISHED @KTBS



Activity :

Enact and show, how the living beings given below enjoy during rain or after the rain.

ಕೆಳಗೆ ಕೊಟ್ಟ ಜೀವಿಗಳು ಮಳೆ ಬರುವಾಗ ಅಥವಾ ನಂತರ ನಲಿಯುವುದನ್ನು ಅಭಿನಯಿಸಿ ತೋರಿಸು.

coconut tree ತೆಂಗಿನ ಮರ	banana plant ಬಾಳೆಯ ಗಿಡ	pumpkin creeper ಕುಂಬಳ ಬಳ್ಳಿ	
grass ಹುಲ್ಲು	paddy plant ಭತ್ತದ ಸಸಿ	frog ಕಪ್ಪೆ	fish ಮೀನು
Cow ಹಸು	tortoise ಆಮೆ	bird ಪಕ್ಷಿ	



All right, children....
I shall proceed forward.

ಸರಿ, ಪುಟಾಣಿಗಳಾ.... ನಾನಿನ್ನು ಮುಂದಕ್ಕೆ ಸಾಗುವೆ.

Drop of water.... will you really go?

ಹನಿಯಣ್ಣಾ.... ನೀನು ಹೊರಟೇಬಿಟ್ಟೆಯಾ?





Yes,
I have to go. Please collect small poems on rain with the help of elders. Sing them melodiously.

ಹೌದು, ನಾನಿನ್ನು ಬರುತ್ತೇನೆ. ನೀವು ಮಳೆಯ ಬಗ್ಗೆ ಸಣ್ಣ ಕವನಗಳನ್ನು ಹಿರಿಯರಿಂದ ಸಂಗ್ರಹಿಸಿ. ಅವನ್ನು ರಾಗವಾಗಿ ಹಾಡಿ.

©KTPS NOT TO BE REPUBLISHED

LESSON – 6

VARIETY OF FOOD

D3E6S2

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- *know the varieties of food.*
  ಆಹಾರದಲ್ಲಿನ ವೈವಿಧ್ಯವನ್ನು ತಿಳಿಯುವೆ.
- *get introduced to the varieties of food used in your districts.*
  ನಿನ್ನ ಜಿಲ್ಲೆಯಲ್ಲಿನ ವಿವಿಧ ಆಹಾರಗಳನ್ನು ಪರಿಚಯ ಮಾಡಿಕೊಳ್ಳುವೆ.
- *make a list of food obtained from plants and animals.*
  ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಆಹಾರವನ್ನು ಪಟ್ಟಿಮಾಡುವೆ.
- *identify the quantity of food consumed according to sex, age and physical activities.*
  ಲಿಂಗ, ವಯಸ್ಸು ಮತ್ತು ದೈಹಿಕ ಚಟುವಟಿಕೆಗಳಿಗೆ ಅನುಗುಣವಾಗಿ ಸೇವಿಸುವ ಆಹಾರದ ಪ್ರಮಾಣವನ್ನು ಗುರುತಿಸುವೆ.
- *identify the food of wild animals, domestic animals, insects found in home and other animals.*
  ಕಾಡುಪ್ರಾಣಿ, ಸಾಕುಪ್ರಾಣಿ ಮತ್ತು ಮನೆಯಲ್ಲಿ ಕಂಡುಬರುವ ಕೀಟಗಳು ಮೊದಲಾದ ಪ್ರಾಣಿಗಳ ಆಹಾರವನ್ನು ಗುರುತಿಸುವೆ.

NOT TO BE REPUBLISHED © KSEEBS

You have already know the different food items that you eat. Answer the following questions.

ನೀನು ಸೇವಿಸುವ ವಿವಿಧ ಆಹಾರಗಳ ಬಗ್ಗೆ ಈಗಾಗಲೇ ತಿಳಿದಿರುವೆ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

1. Write 5 food items that you eat everyday, in the space given below.
   ನೀನು ಪ್ರತಿನಿತ್ಯ ಸೇವಿಸುವ 5 ಆಹಾರ ಪದಾರ್ಥಗಳನ್ನು ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆ.



_____, _____

_____, _____

_____

2. Why do you eat these food items everyday? Write the reason in the space given below.

ಈ ಆಹಾರ ಪದಾರ್ಥಗಳನ್ನು ಪ್ರತಿನಿತ್ಯ ಏಕೆ ತಿನ್ನುವೆ? ಕಾರಣವನ್ನು ಕೆಳಗಿನ ಖಾಲಿ ಜಾಗದಲ್ಲಿ ಬರೆ.

_____

_____

3. Write 5 food items that you eat on festivals or on special days.

ನೀನು ಹಬ್ಬ ಅಥವಾ ವಿಶೇಷ ದಿನಗಳಲ್ಲಿ ತಿನ್ನುವ 5 ಆಹಾರಗಳನ್ನು ಬರೆ.

_____, _____, _____, _____, _____.

4. Write 5 food items that you like very much.

ನಿನಗೆ ಇಷ್ಟವಾದ 5 ಆಹಾರಗಳನ್ನು ಬರೆ.

_____, _____, _____, _____, _____.

5. Why do you like them?

ಇವು ನಿನಗೆ ಏಕೆ ಇಷ್ಟ?

_____

_____

6. Which 5 food items that you do not like?

ನೀನು ಇಷ್ಟ ಪಡದ 5 ಆಹಾರಗಳು ಯಾವುವು?

_____, _____, _____, _____, _____.

@KTBS NOT TO BE REPUBLISHED

7. Why do you not like them?

ಇವುಗಳನ್ನು ನೀನು ಏಕೆ ಇಷ್ಟ ಪಡುವುದಿಲ್ಲ?

_____

_____

Compare your answers with those of your friends. Are the answers the same? If not, why? Think and write.

ನಿನ್ನ ಉತ್ತರಗಳನ್ನು ಗೆಳೆಯ/ಗೆಳತಿಯರ ಉತ್ತರದೊಂದಿಗೆ ಹೋಲಿಸು. ಉತ್ತರಗಳು ಒಂದೇ ಆಗಿವೆಯೇ? ಇಲ್ಲವಾದಲ್ಲಿ ಏಕೆ? ಯೋಚಿಸಿ, ಬರೆ.

_____

_____

_____

_____

@KTBS NOT TO BE REPUBLISHED

Activity : *Make a list of food items that are grown in your place.*

ನಿನ್ನ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡು.

_____ _____

_____ _____

_____ _____

_____ _____

Know this :

- *Food habits differ from person to person. Similarly, the food habits of people of different places also differ.*

  ಪ್ರತಿಯೊಬ್ಬರ ಆಹಾರ ಪದ್ಧತಿ ಬೇರೆ ಬೇರೆಯಾಗಿರುತ್ತದೆ. ಹಾಗೆಯೇ, ವಿವಿಧ ಪ್ರದೇಶದ ಜನರ ಆಹಾರ ಕ್ರಮವೂ ಭಿನ್ನವಾಗಿರುತ್ತದೆ.

- *People eat according to the taste, food habits and the food items available in plenty in that place or region.*

  ರುಚಿ, ಪದ್ಧತಿಗೆ ಅನುಗುಣವಾಗಿ ಮತ್ತು ಆಯಾ ಊರಿನಲ್ಲಿ ಅಥವಾ ಪ್ರದೇಶದಲ್ಲಿ ಹೆಚ್ಚಾಗಿ ದೊರಕುವ ಆಹಾರವನ್ನೇ ಜನರು ಸೇವಿಸುತ್ತಾರೆ.

  For example, *The people eat more of jowar in the region where jowar is grown in plenty. People who live on the sea shore, eat more of fish. Thus, food habits of people differ from person to person.*

  ಉದಾಹರಣೆಗೆ, ಜೋಳ ಹೆಚ್ಚಾಗಿ ಬೆಳೆಯುವ ಪ್ರದೇಶದ ಜನರು ಜೋಳವನ್ನು ಹೆಚ್ಚು ತಿನ್ನುತ್ತಾರೆ. ಸಮುದ್ರದ ತೀರದಲ್ಲಿ ವಾಸಿಸುವ ಜನರು ಸಮುದ್ರ ಮೀನನ್ನು ಹೆಚ್ಚಾಗಿ ತಿನ್ನುತ್ತಾರೆ. ಹೀಗಾಗಿ, ಪ್ರತಿಯೊಬ್ಬರ ಆಹಾರ ಕ್ರಮದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

© KTBS NOT TO BE REPUBLISHED

You have already known why we need food. The different requirements of food are shown in the pictures given below. Observe the pictures.

ನಮಗೆ ಆಹಾರ ಏಕೆ ಬೇಕು ಎಂದು ನಿನಗೀಗಾಗಲೇ ಗೊತ್ತಿದೆ. ಕೆಳಗಿನ ಚಿತ್ರಗಳಲ್ಲಿ ಆಹಾರದ ವಿವಿಧ ಅವಶ್ಯಕತೆಗಳನ್ನು ತೋರಿಸಿದೆ. ಚಿತ್ರಗಳನ್ನು ಗಮನಿಸು.








Which are the food items that give us strength ? Which are the food items that help us to grow? Which are the food items that are required to keep us healthy? Know this from the pictures given below.

ಯಾವ ಆಹಾರ ಪದಾರ್ಥಗಳು ನಮಗೆ ಶಕ್ತಿಯನ್ನು ಒದಗಿಸುತ್ತವೆ? ಯಾವ ಆಹಾರ ಪದಾರ್ಥಗಳು ನಮ್ಮ ಬೆಳವಣಿಗೆಗೆ ಸಹಕರಿಸುತ್ತವೆ? ನಾವು ಆರೋಗ್ಯವಂತರಾಗಿರಲು ಯಾವ ಆಹಾರಗಳು ಅಗತ್ಯ? ಕೆಳಗಿನ ಚಿತ್ರಗಳಿಂದ ಇದನ್ನು ತಿಳಿದುಕೊ.




Food items that make us strong

ಶಕ್ತಿ ಪ್ರಧಾನವಾದ ಆಹಾರಗಳು

Rice, ragi, jowar, wheat, foxtail millet, pearl millet, oil, ghee, sugar, jaggery, meat etc., give us strength.

ಅಕ್ಕಿ, ರಾಗಿ, ಜೋಳ, ಗೋಧಿ, ನವಣೆ, ಸಜ್ಜೆ, ಎಣ್ಣೆ, ತುಪ್ಪ, ಸಕ್ಕರೆ, ಬೆಲ್ಲ, ಮಾಂಸ ಇತ್ಯಾದಿಗಳು ನಮಗೆ ಶಕ್ತಿ ನೀಡುತ್ತವೆ.



Food items that help us to grow

ಬೆಳವಣಿಗೆಗೆ ಪ್ರಧಾನವಾದ ಆಹಾರಗಳು

Pulses like toordhal, cowgram, black gram, milk, egg, meat etc., help us grow.

ತೊಗರಿ, ಅವರೆ, ಉದ್ದುಗಳಂತಹ ಬೇಳೆ ಕಾಳುಗಳು, ಹಾಲು, ಮೊಟ್ಟೆ, ಮಾಂಸ ಇತ್ಯಾದಿಗಳು ನಮ್ಮ ಬೆಳವಣಿಗೆಗೆ ಸಹಾಯ ಮಾಡುತ್ತವೆ.

© KTBS NOT TO BE REPUBLISHED

Write the names of other grains that you know.
ನಿನಗೆ ಗೊತ್ತಿರುವ ಇತರ ಬೇಳೆಕಾಳುಗಳ ಹೆಸರುಗಳನ್ನು ಬರೆ.

_____, _____, _____, _____, _____,

_____, _____, _____, _____, _____.



Food items that help us stay healthy

ಆರೋಗ್ಯ ಕಾಪಾಡುವ ಆಹಾರಗಳು

By eating more vegetables and fruits we can avoid diseases.

ತರಕಾರಿ ಮತ್ತು ಹಣ್ಣುಗಳನ್ನು ಹೆಚ್ಚಾಗಿ ಸೇವಿಸುವುದರಿಂದ ರೋಗಗಳನ್ನು ತಡೆಗಟ್ಟಬಹುದು.

Know this :


- *Raw vegetables, sprouted seeds and fresh fruits keep us healthy.*

  ಹಸಿ ತರಕಾರಿ, ಮೊಳಕೆ ಕಟ್ಟಿದ ಕಾಳುಗಳು ಮತ್ತು ತಾಜಾ ಹಣ್ಣುಗಳು ನಮ್ಮ ಆರೋಗ್ಯವನ್ನು ಕಾಪಾಡುತ್ತವೆ.

- *We should drink more water daily to maintain good health.*

  ಆರೋಗ್ಯವಾಗಿರಲು ನಾವು ಪ್ರತಿನಿತ್ಯವೂ ಹೆಚ್ಚು ನೀರನ್ನು ಕುಡಿಯಬೇಕು.

What did you eat yesterday? Draw its picture in this plate.
ನಿನ್ನೆ ನೀನು ಏನನ್ನು ಸೇವಿಸಿದೆ? ಆ ಆಹಾರದ ಚಿತ್ರವನ್ನು ಈ ತಟ್ಟೆಯಲ್ಲಿ ಬರೆ.



© KTBS NOT TO BE REPUBLISHED

Make a list of the food items that are in your plate and your friends' plates

ನಿನ್ನ ತಟ್ಟೆಯಲ್ಲಿರುವ ಹಾಗೂ ನಿನ್ನ ಗೆಳೆಯ/ಗೆಳತಿಯರ ತಟ್ಟೆಯಲ್ಲಿರುವ ಆಹಾರಗಳ ಪಟ್ಟಿ ತಯಾರಿಸು.

_____, _____, _____, _____, _____,

_____, _____, _____, _____, _____.

Write the food materials used to prepare these food items.


ಈ ಆಹಾರಗಳನ್ನು ತಯಾರಿಸಲು ಬಳಸಿರುವ ಆಹಾರ ಪದಾರ್ಥಗಳನ್ನು ಬರೆ.

Food item **ಆಹಾರ**	**Basic food material** **ಆಹಾರದ ಮೂಲ ಪದಾರ್ಥ**
Example : Roti ಉದಾಹರಣೆ : ರೊಟ್ಟಿ	ragi/rice/jowar/wheat ರಾಗಿ/ಅಕ್ಕಿ/ಜೋಳ/ಗೋಧಿ
1. _____	_____
2. _____	_____
3. _____	_____
4. _____	_____
5. _____	_____
6. _____	_____
7. _____	_____
8. _____	_____
9. _____	_____
10. _____	_____

@KTBS NOT TO BE REPUBLISHED

Activity : *Once again observe the list that you have prepared. Get clues from it and fill in the blanks.*

ನೀನು ತಯಾರಿಸಿದ ಪಟ್ಟಿಯನ್ನು ಇನ್ನೊಮ್ಮೆ ಗಮನಿಸು. ಇದರಿಂದ ಸುಳಿವು ಪಡೆದು, ಬಿಟ್ಟ ಜಾಗಗಳನ್ನು ತುಂಬು.



@KTBS NOT TO BE REPUBLISHED

Activity : *You know where we get the food materials that you have listed.*


For example, *we get rice from the paddy plant.*

ಪಟ್ಟಿ ಮಾಡಿದ ಆಹಾರ ಪದಾರ್ಥಗಳು ಎಲ್ಲಿಂದ ಬರುತ್ತವೆ ಎಂದು ನಿನಗೆ ತಿಳಿದಿದೆ. **ಉದಾಹರಣೆಗೆ,** ಅಕ್ಕಿಯು ಭತ್ತದ ಸಸಿಯಿಂದ ಬರುತ್ತದೆ.


Classify the food items that are available in your place as plant source and animal source.

ನಿನ್ನ ಊರಿನಲ್ಲಿ ದೊರಕುವ ಆಹಾರ ಪದಾರ್ಥಗಳನ್ನು ಸಸ್ಯಮೂಲ ಮತ್ತು ಪ್ರಾಣಿಮೂಲ ಎಂದು ವಿಂಗಡಿಸಿ ಬರೆ.

Plant source
ಸಸ್ಯಮೂಲ



Animal source
ಪ್ರಾಣಿಮೂಲ



@KTBS NOT TO BE REPUBLISHED

Play the game :

With the help of your friends, prepare small badges of the food items. Take two small boxes of card board. Stick the picture of an animal that you like on one box and the picture of a plant that you like on the other box.

ಆಹಾರ ಪದಾರ್ಥಗಳ ಹೆಸರಿನ ಸಣ್ಣ ಸಣ್ಣ ಬಿಲ್ಲೆಗಳನ್ನು ಗೆಳೆಯರೊಂದಿಗೆ ಕೂಡಿ ತಯಾರಿಸು. ಎರಡು ರಟ್ಟಿನ ಡಬ್ಬಗಳನ್ನು ತೆಗೆದುಕೊ. ಒಂದು ಡಬ್ಬದ ಮೇಲೆ ನಿನಗಿಷ್ಟವಾದ ಪ್ರಾಣಿಯ ಚಿತ್ರ ಅಂಟಿಸು. ಮತ್ತೊಂದು ಡಬ್ಬದ ಮೇಲೆ ನಿನಗಿಷ್ಟವಾದ ಸಸ್ಯದ ಚಿತ್ರ ಅಂಟಿಸು.

Distribute the badges among all. Put them into the suitable box.

ಎಲ್ಲರೂ ಬಿಲ್ಲೆಗಳನ್ನು ಹಂಚಿಕೊಳ್ಳಿ. ಅವರವರಿಗೆ ಸಿಕ್ಕಿರುವ ಆಹಾರ ಬಿಲ್ಲೆಗಳನ್ನು ಸೂಕ್ತವಾಗಿರುವ ಡಬ್ಬಕ್ಕೆ ಹಾಕಿ.

Observe the quantity of food eaten by you and the people younger to you and elder to you.

ನೀನು, ನಿನಗಿಂತ ಸಣ್ಣವರು ಹಾಗೂ ನಿನಗಿಂತ ದೊಡ್ಡವರು ಸೇವಿಸುವ ಆಹಾರದ ಪ್ರಮಾಣವನ್ನು ಗಮನಿಸು.

Activity : *Observe the children of different classes eating during the midday meals in your school. Write your observations here.*

ಮಧ್ಯಾಹ್ನದ ಊಟದ ವೇಳೆಯಲ್ಲಿ ನಿನ್ನ ಶಾಲೆಯ ವಿವಿಧ ತರಗತಿಯ ಮಕ್ಕಳು ಊಟ ಮಾಡುವುದನ್ನು ಗಮನಿಸು. ನೀನು ಏನನ್ನು ಗಮನಿಸಿದೆ ಎಂದು ಇಲ್ಲಿ ಬರೆ.

_____

_____

_____

_____

_____

_____

@KTBS NOT TO BE REPUBLISHED



know this :

People eat according to their age and the nature of the work they do. The quantity of food eaten by boys and girls of the same age differs.

ಜನರು ತಮ್ಮ ವಯಸ್ಸಿಗೆ ತಕ್ಕಂತೆ ಆಹಾರವನ್ನು ಸೇವಿಸುತ್ತಾರೆ. ಅವರು ಮಾಡುವ ಕೆಲಸಕ್ಕೆ ತಕ್ಕಂತೆ ಅಹಾರವನ್ನು ಸೇವಿಸುತ್ತಾರೆ. ಒಂದೇ ವಯಸ್ಸಿನ ಹುಡುಗರು/ಹುಡುಗಿಯರು ತಿನ್ನುವ ಆಹಾರದ ಪ್ರಮಾಣ ಬೇರೆ ಬೇರೆಯಾಗಿರುತ್ತದೆ.

- What is the food of a baby?

  ಪುಟ್ಟ ಮಗುವಿಗೆ ಕೊಡುವ ಆಹಾರವೇನು?

  _____

Milk is the main and complete food for small children.
ಹಾಲು ಚಿಕ್ಕ ಮಕ್ಕಳ ಪ್ರಮುಖ ಹಾಗೂ ಸಂಪೂರ್ಣ ಆಹಾರ.



- Can you live drinking milk only?
  ನೀನು ಹಾಲನ್ನು ಮಾತ್ರ ಕುಡಿದು ಇರಬಲ್ಲೆಯಾ?

_____

You have learnt in the previous class that animals also need food like you. Write the food of the animals given below.


ನಿನ್ನಂತೆ ಪ್ರಾಣಿಗಳಿಗೂ ಆಹಾರ ಬೇಕು ಎಂದು ಹಿಂದಿನ ಪಾಠದಿಂದ ತಿಳಿದಿದ್ದೀಯ. ಈ ಕೆಳಗೆ ಕೊಟ್ಟಿರುವ ಪ್ರಾಣಿಗಳ ಆಹಾರವನ್ನು ಬರೆ.

Name of animals ಪ್ರಾಣಿಗಳ ಹೆಸರು	Food ಆಹಾರ	Name of animals ಪ್ರಾಣಿಗಳ ಹೆಸರು	Food ಆಹಾರ
1. dog ನಾಯಿ	_____	9. bear ಕರಡಿ	_____
2. cat ಬೆಕ್ಕು	_____	10. tiger ಹುಲಿ	_____
3. cow ಹಸು	_____	11. hawk ಗಿಡುಗ	_____
4. monkey ಕೋತಿ	_____	12. snake ಹಾವು	_____
5. hen ಕೋಳಿ	_____	13. fish ಮೀನು	_____
6. bandicoot ಹೆಗ್ಗಣ	_____	14. deer ಜಿಂಕೆ	_____
7. mosquito ಸೊಳ್ಳೆ	_____	15. frog ಕಪ್ಪೆ	_____
8. lizard ಹಲ್ಲಿ	_____	16. bison ಕಾಡುಕೋಣ	_____

@KTBS NOT TO BE REPUBLISHED

Observe the quantity of food eaten by a cow and a calf. In the same way, observe the food and quantity of food eaten by other animals.

ಹಸು ಮತ್ತು ಕರು ತಿನ್ನುವ ಆಹಾರದ ಪ್ರಮಾಣವನ್ನು ಗಮನಿಸು. ಹೀಗೆಯೇ ಬೇರೆ ಪ್ರಾಣಿಗಳು ಸೇವಿಸುವ ಆಹಾರ ಮತ್ತು ಅದರ ಪ್ರಮಾಣವನ್ನು ಗಮನಿಸು.



Write the names of the domestic animals that you know and the food given to them.

ನಿನಗೆ ಗೊತ್ತಿರುವ ಸಾಕು ಪ್ರಾಣಿಗಳ ಹೆಸರು ಬರೆದು ಅವುಗಳಿಗೆ ನೀಡುವ ಆಹಾರವನ್ನು ಬರೆ.

Name of the animal ಪ್ರಾಣಿಗಳ ಹೆಸರು	**Food given** ನೀಡುವ ಆಹಾರ
1. _____	_____
2. _____	_____
3. _____	_____
4. _____	_____
5. _____	_____

© KTBS NOT TO BE REPUBLISHED

Play the game



Go to the play ground with your friends and stand in a circle with the help of your teacher. Each of you receive a chit from your teacher which has the names of animals or their food. Let each one stick the chit on the shirt. When the teacher says ***move****, start moving in the circle. When the teacher says* ***stop****,one who has the picture of the animal should stand near the other who has the picture of its food. Those who miss to do so will be out of the game. Others can continue the game.*

ನಿನ್ನ ಗೆಳೆಯ, ಗೆಳತಿಯರೊಂದಿಗೆ ಆಟದ ಮೈದಾನಕ್ಕೆ ಹೋಗಿ ಶಿಕ್ಷಕರ ಸಹಾಯದಿಂದ ವೃತ್ತಾಕಾರದಲ್ಲಿ ನಿಲ್ಲಿರಿ. ಎಲ್ಲರೂ ಶಿಕ್ಷಕರಿಂದ ಪ್ರಾಣಿಗಳ ಚಿತ್ರವಿರುವ ಅಥವಾ ಅವುಗಳ ಆಹಾರದ ಚಿತ್ರವಿರುವ ಕಾರ್ಡ್‌ಗಳನ್ನು ಪಡೆದುಕೊಳ್ಳಿ. ಅವುಗಳನ್ನು ಪಿನ್ನಿನ ಸಹಾಯದಿಂದ ಅಂಗಿಗೆ ಹಾಕಿಕೊಳ್ಳಿ. ಶಿಕ್ಷಕರು **ಸುತ್ತಿ** ಎಂದಾಗ ವೃತ್ತಾಕಾರವಾಗಿ ಸುತ್ತಿ. **ನಿಲ್ಲಿ** ಎಂದಾಗ ಪ್ರಾಣಿಯ ಚಿತ್ರವಿರುವವರು ಅದರ ಆಹಾರದ ಚಿತ್ರವಿರುವವರ ಬಳಿ ಹೋಗಿ ನಿಲ್ಲಿ. ತಪ್ಪಿದವರು ಆಟದಿಂದ ಹೊರಗುಳಿಯಬೇಕು. ಉಳಿದವರು ಆಟವನ್ನು ಮುಂದುವರೆಸಬಹುದು.

© NCERT NOT TO BE REPUBLISHED



Know this

- *Animals which eat plants and their products are called* ***herbivorous animals.***

  ಸಸ್ಯಗಳು ಮತ್ತು ಅವುಗಳಿಂದ ದೊರೆಯುವ ಪದಾರ್ಥಗಳನ್ನು ತಿನ್ನುವ ಪ್ರಾಣಿಗಳು **ಸಸ್ಯಾಹಾರಿಗಳು**.

- *Animals which eat other animals only are called* ***carnivorous animals***.

  ಪ್ರಾಣಿಗಳನ್ನೇ ಆಹಾರವಾಗಿ ತಿನ್ನುವ ಪ್ರಾಣಿಗಳು **ಮಾಂಸಾಹಾರಿಗಳು**.

- *Animals which eat both plants and animals and their products are called* ***omnivorous animals***.

  ಸಸ್ಯ ಮತ್ತು ಪ್ರಾಣಿಗಳು ಹಾಗೂ ಅವುಗಳಿಂದ ದೊರೆಯುವ ಪದಾರ್ಥಗಳನ್ನು ತಿನ್ನುವ ಪ್ರಾಣಿಗಳು **ಮಿಶ್ರಾಹಾರಿಗಳು**.

Activity : *Here is a problem. The animals are tied with a thread to the food they eat. As the thread is entangled, it is difficult for them to find their food. Can you help them to find their food?*

ಇಲ್ಲೊಂದು ಸಮಸ್ಯೆ ಇದೆ. ಪ್ರಾಣಿಗಳು ಮತ್ತು ಅವುಗಳ ಆಹಾರವನ್ನು ದಾರದಿಂದ ಕಟ್ಟಲಾಗಿದೆ. ಈ ದಾರಗಳು ಚೆನ್ನಾಗಿ ಹೆಣೆದುಕೊಂಡಿರುವುದರಿಂದ ಪ್ರಾಣಿಗಳಿಗೆ ಅವುಗಳ ಆಹಾರವನ್ನು ಹುಡುಕಲು ಕಷ್ಟವಾಗುತ್ತಿದೆ. ನೀನು ಹುಡುಕಿ ಕೊಡುವೆಯಾ?



NOT TO BE REPUBLISHED

Activity : *Here are the pictures of a few animals. There are 3 bags in the middle. Divide these animals on the basis of their food habits. Then draw a line to the bag related to the animals.*

ಇಲ್ಲಿ ಕೆಲವು ಪ್ರಾಣಿಗಳ ಚಿತ್ರಗಳಿವೆ. ಪ್ರಾಣಿಗಳ ಮಧ್ಯದಲ್ಲಿ ೩ ಚೀಲಗಳಿವೆ. ಪ್ರಾಣಿಗಳನ್ನು ಅವುಗಳ ಆಹಾರ ಕ್ರಮದ ಮೇಲೆ ವಿಂಗಡಿಸಿ, ನಂತರ ಅವುಗಳಿಗೆ ಸಂಬಂಧಿಸಿದ ಚೀಲಕ್ಕೆ ಗೆರೆ ಎಳೆ.



© SCERTS NOT TO BE REPUBLISHED

LESSON – 7

OUR KITCHEN

E7R2X3

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- *identify the different utensils and fuels used to prepare food.*

  ಆಹಾರ ತಯಾರಿಕೆಯಲ್ಲಿ ಬಳಸುವ ವಿವಿಧ ಪರಿಕರಗಳು ಮತ್ತು ಇಂಧನಗಳನ್ನು ಗುರುತಿಸುವೆ.

- *identify the role of the family members in preparing food.*

  ಆಹಾರ ತಯಾರಿಕೆಯಲ್ಲಿ ಕುಟುಂಬದ ಸದಸ್ಯರ ಪಾತ್ರವನ್ನು ಗುರುತಿಸುವೆ.

You have learnt in the previous lesson that all living beings need food.There are different types of food. People of different places have different food habits. Now let's know how food is prepared in your home.

ಎಲ್ಲಾ ಜೀವಿಗಳಿಗೂ ಆಹಾರ ಬೇಕು. ಆಹಾರದಲ್ಲಿ ಅನೇಕ ಬಗೆಗಳಿವೆ. ವಿವಿಧ ಪ್ರದೇಶದ ಜನರು ವಿವಿಧ ಆಹಾರ ಕ್ರಮಗಳನ್ನು ಅನುಸರಿಸುತ್ತಾರೆ ಎನ್ನುವುದನ್ನು ನೀನು ಹಿಂದಿನ ಪಾಠದಲ್ಲಿ ಕಲಿತಿದ್ದೀಯೆ. ಈಗ ನಿನ್ನ ಮನೆಯಲ್ಲಿ ಆಹಾರವನ್ನು ಹೇಗೆ ತಯಾರಿಸುತ್ತಾರೆ ಎಂಬುದನ್ನು ತಿಳಿಯೋಣ.

- Who helps in cooking food in your home ?

  ನಿನ್ನ ಮನೆಯಲ್ಲಿ ಯಾರು ಯಾರು ಅಡುಗೆ ಮಾಡಲು ಸಹಕರಿಸುತ್ತಾರೆ?

  _____

  _____

  _____

- How do you help in cooking ?

  ಅಡುಗೆ ಮಾಡಲು ನೀನು ಹೇಗೆ ಸಹಾಯ ಮಾಡುವೆ?

  _____

  _____

  _____

NOT TO BE REPUBLISHED © KSEERT

- Name 5 things that are used for cooking in your home.
  ನಿನ್ನ ಮನೆಯಲ್ಲಿ ಅಡುಗೆ ಮಾಡಲು ಬಳಸುವ 5 ವಸ್ತುಗಳನ್ನು ಬರೆ.

_____, _____, _____,

_____, _____ .

In this picture, Ramu, his sister, his father and his mother are cooking together. Answer the questions with the help of the picture.

ಈ ಚಿತ್ರದಲ್ಲಿ ರಾಮು, ಅವನ ಅಕ್ಕ, ತಂದೆ ಮತ್ತು ತಾಯಿ ಸೇರಿ ಅಡುಗೆ ಮಾಡುತ್ತಿದ್ದಾರೆ. ಚಿತ್ರದ ಸಹಾಯದಿಂದ ಪ್ರಶ್ನೆಗಳಿಗೆ ಉತ್ತರಿಸು.



NOT TO BE REPUBLISHED

- What type of works are they doing?
  ಇವರು ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ ?

mother _____ father _____
ತಾಯಿ ತಂದೆ

Ramu _____ sister _____
ರಾಮು ಅಕ್ಕ

- Write the names of the things that are seen in this picture.
  ಈ ಚಿತ್ರದಲ್ಲಿ ಕಂಡು ಬರುವ ವಸ್ತುಗಳ ಹೆಸರುಗಳನ್ನು ಬರೆ.

_____, _____, _____, _____, _____,

_____, _____, _____, _____, _____.

- Here is a list of different materials used for cooking. Put a (✓) mark to the ones you see in this picture.

  ಆಹಾರ ತಯಾರಿಕೆಯಲ್ಲಿ ಉಪಯೋಗಿಸುವ ವಿವಿಧ ಪರಿಕರಗಳ ಪಟ್ಟಿಯನ್ನು ಕೊಟ್ಟಿದೆ. ಈ ಚಿತ್ರದಲ್ಲಿ ಕಂಡುಬರುವ ಪರಿಕರಗಳಿಗೆ (✓) ಗುರುತು ಹಾಕು.

cup ಲೋಟ	spoon ಚಮಚ	water mug ನೀರಿನ ಚೆಂಬು
steel vessel ಸ್ಟೀಲ್ ಪಾತ್ರೆ	plate ತಟ್ಟೆ	glass bowl ಗಾಜಿನ ಬಟ್ಟಲು
water drum ನೀರಿನ ಡ್ರಂ	earthen pot ಮಡಕೆ	pot ಕೊಡ/ಬಿಂದಿಗೆ
gas stove ಗ್ಯಾಸ್ ಸ್ಟೌವ್	knife ಚಾಕು	charcoal stove ಕೆಂಡದ ಒಲೆ (ಇದ್ದಿಲು ಒಲೆ)
cooker ಕುಕ್ಕರ್	ladle ಸೌಟು	vegetable cutter stand ತರಕಾರಿ ಹೆಚ್ಚುವ ಮಣೆ
firewood stove/oven ಸೌದೆ ಒಲೆ	tongs ಇಕ್ಕಳ	kerosene stove. ಸೀಮೆಎಣ್ಣೆ ಸ್ಟೌವ್
chapathi roller stand ಚಪಾತಿ ಮಣೆ	flour stirrer ಹಿಟ್ಟಿನ ಕೋಲು	chapathi roller ಲಟ್ಟಣಿಗೆ (ಲತ್ತೂಡಿ)

© DIKTBS NOT TO BE REPUBLISHED

Make a list of all the utensils used in your home to prepare food.

ನಿನ್ನ ಮನೆಯಲ್ಲಿ ಆಹಾರವನ್ನು ತಯಾರಿಸಲು ಬಳಸುವ ಪರಿಕರಗಳನ್ನು ಪಟ್ಟಿ ಮಾಡು.

_____, _____, _____, _____,

_____, _____, _____, _____,

_____, _____, _____, _____,

_____, _____, _____, _____.

Activity : *How did you help?*

ನೀನೇನು ಸಹಾಯ ಮಾಡಿದೆ ?



1. Preparing lime juice

ತಂಪು ಪಾನಕ ತಯಾರಿಸಲು

brother ಅಣ್ಣ	*sister* ತಂಗಿ	*I* ನಾನು
cut the lemon. ನಿಂಬೆಹಣ್ಣು ಹೆಚ್ಚಿದನು.	*brought sugar and water.* ನೀರು–ಸಕ್ಕರೆ ತಂದಳು.	

2. Preparing hot chapatis

ಬಿಸಿಬಿಸಿ ಚಪಾತಿ ಮಾಡಲು



I ನಾನು	*father* ಅಪ್ಪ	*mother* ಅಮ್ಮ
	kneads the wheat flour and makes dough balls. ಗೋಧಿಹಿಟ್ಟನ್ನು ನೀರಿನೊಂದಿಗೆ ಕಲಸಿ, ಉಂಡೆಗಳನ್ನಾಗಿ ಮಾಡಿದರು.	*rolls the dough balls into chapati.* ಹಿಟ್ಟನ್ನು ಲಟ್ಟಿಸಿ ಚಪಾತಿ ಮಾಡಿದರು.

sister ಅಕ್ಕ	*all of us* ನಾವೆಲ್ಲರೂ
cooked the chapathi on the pan. ಕಾವಲಿಯ ಮೇಲೆ ಬೇಯಿಸಿದಳು.	*ate the chapathis together.* ಒಟ್ಟಾಗಿ ಚಪಾತಿ ತಿಂದೆವು.

NOT TO BE REPUBLISHED © KSCERT

3. Cooking rice

ಅನ್ನ ಮಾಡಲು




grandpa ಅಜ್ಜ	*I* ನಾನು	*sister* ಅಕ್ಕ
put the rice into a bowl. ಅಕ್ಕಿಯನ್ನು ಪಾತ್ರೆಗೆ ಹಾಕಿದರು.		*Mix water to the rice, put the vessel on the stove and prepared rice.* ಅಕ್ಕಿಗೆ ನೀರು ಬೆರೆಸಿ, ಒಲೆಯ ಮೇಲಿಟ್ಟು ಅನ್ನ ಮಾಡಿದರು.

- Have you eaten raw (uncooked) food?
  ಬೇಯಿಸದೇ ಇರುವ ಆಹಾರವನ್ನು ನೀನು ತಿಂದಿದ್ದೀಯಾ?

  _____

- Write 3 raw food items that we can eat.
  (Remember what you have learnt in the previous class)
  ಬೇಯಿಸದೇ ತಿನ್ನಬಹುದಾದ 3 ಆಹಾರಗಳನ್ನು ಬರೆ.
  (ಹಿಂದಿನ ತರಗತಿಯಲ್ಲಿ ಕಲಿತ ಅಂಶಗಳನ್ನು ಇಲ್ಲಿ ನೆನಪು ಮಾಡಿಕೋ)




- Your friend Latha is going to tell us the method of prepaing **moongdhal Kosambari.**
  ನಿನ್ನ ಗೆಳತಿ ಲತಾ **ಹೆಸರುಬೇಳೆ ಕೋಸಂಬರಿ** ತಯಾರಿಸುವ ವಿಧಾನವನ್ನು ಪರಿಚಯಿಸುತ್ತಿದ್ದಾಳೆ.

@KTBS NOT TO BE REPUBLISHED

Soak moong dal in water for sometime. ಹೆಸರುಬೇಳೆಯನ್ನು ನೀರಿನಲ್ಲಿ ಸ್ವಲ್ಪ ಹೊತ್ತು ನೆನೆಹಾಕು. →	Scrape carrot. ಕ್ಯಾರೆಟನ್ನು ತುರಿ. →	Cut chillis and coriander leaves into small pieces. ಮೆಣಸಿನ ಕಾಯಿ ಮತ್ತು ಕೊತ್ತಂಬರಿ ಸೊಪ್ಪನ್ನು ಸಣ್ಣಗೆ ಕತ್ತರಿಸು.
Mix all these with soaked moong dal and put some grated coconut. ಚೆನ್ನಾಗಿ ನೆನೆದ ಹೆಸರುಬೇಳೆಯೊಂದಿಗೆ ಎಲ್ಲವನ್ನೂ ಮಿಶ್ರಣ ಮಾಡಿ, ಸ್ವಲ್ಪ ತೆಂಗಿನ ತುರಿಯನ್ನು ಹಾಕು. →	Season it with oil, mustard seeds and curry leaves. ಸ್ವಲ್ಪ ಎಣ್ಣೆಯನ್ನು ಕಾಯಿಸಿ, ಸಾಸಿವೆ ಮತ್ತು ಕರಿಬೇವು ಹಾಕಿ ಒಗ್ಗರಣೆ ತಯಾರಿಸು. →	Pour the seasoning into the mixture and squeeze lemon juice into it. ಒಗ್ಗರಣೆಯನ್ನು ಮಿಶ್ರಣಕ್ಕೆ ಹಾಕು. ನಿಂಬೆ ರಸವನ್ನು ಹಿಂಡು.
Put salt for taste. ಅಗತ್ಯಕ್ಕೆ ತಕ್ಕಷ್ಟು ಉಪ್ಪನ್ನು ಹಾಕು. →	Mix everything for sometime. ಎಲ್ಲವನ್ನು ಚೆನ್ನಾಗಿ ಕಲಸು. →	Eat with your friends. ನಿನ್ನ ಸ್ನೇಹಿತರೊಡನೆ ತಿನ್ನು.


Activity : *Write the procedure of preparing any food item that you know.*

ನಿನಗೆ ಗೊತ್ತಿರುವ ಯಾವುದಾದರೂ ಆಹಾರವನ್ನು ತಯಾರಿಸುವ ವಿಧಾನವನ್ನು ಇಲ್ಲಿ ಬರೆ.



Activity : *Join the dots given in the picture and colour them. Write the names of the utensils in the space provided.*

ಕೆಳಗಿನ ಚಿತ್ರದಲ್ಲಿ ಕೊಟ್ಟಿರುವ ಚುಕ್ಕೆಗಳನ್ನು ಸೇರಿಸಿ ಬಣ್ಣ ಹಚ್ಚು. ಈ ಪಾತ್ರೆಗಳ ಹೆಸರನ್ನು ಬಿಟ್ಟಿರುವ ಜಾಗದಲ್ಲಿ ಬರೆ.



1. _____
2. _____
3. _____
4. _____
5. _____
6. _____
7. _____

©KTBS NOT TO BE REPUBLISHED

Write the food items that can be prepared using the utensils shown in the pictures given below.


ಕೆಳಗಿನ ಚಿತ್ರದಲ್ಲಿರುವ ಪಾತ್ರೆಗಳಲ್ಲಿ ಯಾವ ಆಹಾರ ತಯಾರಿಸಬಹುದು ಎಂಬುದನ್ನು ಬರೆ.




_____ _____ _____



_____ _____ _____



_____ _____ _____



_____ _____ _____



_____ _____ _____





_____ _____ _____



@KTBS NOT TO BE REPUBLISHED

What helps to get flames in these stoves shown here?
ಇಲ್ಲಿ ತೋರಿಸಿರುವ ಒಲೆಗಳು ಯಾವುದರ ಸಹಾಯದಿಂದ ಉರಿಯುತ್ತಿವೆ?





Firewood, kerosene, electricity and gas - all these are fuels. Fuels are needed to cook food.

ಸೌದೆ, ಸೀಮೆಎಣ್ಣೆ, ವಿದ್ಯುತ್, ಅಡುಗೆ ಅನಿಲ (ಗ್ಯಾಸ್) – ಇವೆಲ್ಲವೂ ಇಂಧನಗಳು. ಆಹಾರವನ್ನು ಬೇಯಿಸಲು ಇಂಧನಗಳು ಬೇಕು.

Which are the fuels that are used in your house for cooking?
ನಿನ್ನ ಮನೆಯಲ್ಲಿ ಅಡುಗೆ ಮಾಡಲು ಬಳಸುವ ಇಂಧನಗಳಾವುವು?

Which are the other fuels that are used for cooking?
ಅಡುಗೆ ಮಾಡಲು ಬಳಸುವ ಬೇರೆ ಯಾವ ಇಂಧನಗಳು ನಿನಗೆ ಗೊತ್ತು?

Firewood, cowdung cakes, kerosene, electricity, gas, gobar gas, charcoal are the fuels used for cooking .

ಸೌದೆ, ಬೆರಣಿ, ಸೀಮೆಎಣ್ಣೆ, ವಿದ್ಯುತ್, ಗ್ಯಾಸ್, ಗೋಬರ್ ಗ್ಯಾಸ್, ಇದ್ದಿಲು ಇವೆಲ್ಲ ಅಡುಗೆಗೆ ಬಳಸುವ ವಿವಿಧ ಇಂಧನಗಳು.

@KTBS NOT TO BE REPUBLISHED

Activity : *Each fuel has to be used in a particular kind of stove to get flame. Observe the pictures given below. Then mark as the instruction given below.*

ಪ್ರತಿಯೊಂದು ಇಂಧನವನ್ನು ಉರಿಸಲು ವಿಶಿಷ್ಟವಾದ ಒಲೆಗಳಿವೆ. ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗಮನಿಸು. ನಂತರ ಕೆಳಗೆ ಸೂಚಿಸಿದಂತೆ ಗುರುತು ಹಾಕು.



© KTBS NOT TO BE REPUBLISHED

- Put ◯ mark to the stoves that are used in your house for cooking.

  ನಿನ್ನ ಮನೆಯಲ್ಲಿ ಅಡುಗೆ ಮಾಡಲು ಬಳಸುವ ಒಲೆಗೆ ◯ ಗುರುತು ಹಾಕು.

- Put ▭ mark to the stoves that are used in your friend's house.

  ನಿನ್ನ ಗೆಳೆಯ/ಗೆಳತಿಯ ಮನೆಯಲ್ಲಿ ಬಳಸುವ ಒಲೆಗೆ ▭ ಗುರುತು ಹಾಕು.

- Put △ mark to the stoves/tools that you have seen.

  ನೀನು ನೋಡಿರುವ ಒಲೆ/ಸಾಧನಗಳಿಗೆ △ ಗುರುತು ಹಾಕು.

Activity : *Name the fuels used in these stoves.*

ಈ ಒಲೆಗಳಲ್ಲಿ ಬಳಸುವ ಇಂಧನಗಳನ್ನು ಹೆಸರಿಸು.



_____




_____




_____



_____



_____



_____



_____

@KTBS NOT TO BE REPUBLISHED

LESSON – 8

LET US BUILD A HOUSE

S9C7J7

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- *identifiy the different types of houses.*
  ವಿವಿಧ ರೀತಿಯ ಮನೆಗಳನ್ನು ಗುರುತಿಸುವೆ.
